## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಹೊಸದಾಗಿ ಸ್ಥಾಪಿತವಾಗಿರುವ ಕೆ.ಎಸ್.ಬಿ.ಸಿ.ಎಲ್ ಡಿಪೋಗಳಿಗೆ ಹುದ್ದೆಗಳನ್ನು ಸೃಜಿಸುವ ಕುರಿತು.

ಓದಲಾಗಿದೆ:- 1) ಅಬಕಾರಿ ಆಯುಕ್ತರ ಪತ್ರ ಸಂ.ಇಸಿಇ/07/ಟಿಎಂಪಿ/2013 ದಿನಾಂಕ: 07-10-2013.

2) ಅಬಕಾರಿ ಆಯುಕ್ತರ ಪತ್ರ ಸಂ.ಇಸಿಇ/07/ಟಿಎಂಪಿ/2013 ದಿನಾಂಕ: 28-11-2013.

3) ಅಬಕಾರಿ ಆಯುಕ್ತರ ಪತ್ರ ಸಂ.ಇಸಿಇ/07/ಟಿಎಂಪಿ/2013 ದಿನಾಂಕ: 21-05-2014.

* * * * *

ಪ್ರಸ್ತಾವನೆ:-

ಅಬಕಾರಿ ಆಯುಕ್ತರು ಮೇಲೆ (1) ರಲ್ಲಿ ಓದಲಾದ ದಿನಾಂಕ:07-10-2013ರ ಪತ್ರದಲ್ಲಿ ಕರ್ನಾಟಕ ರಾಜ್ಯ ಪಾನೀಯ ನಿಗಮದ ಕೆಳಕಂಡ 7 ಡಿಪೋಗಳಿಗೆ 21 ಹುದ್ದೆಗಳನ್ನು ಸೃಜನೆ ಮಾಡುವಂತೆ ಕೋರಿದ್ದಾರೆ.

| ಕ್ರ ಸಂ. | ಜಿಲ್ಲೆ | ಕೆ.ಎಸ್.ಬಿ.ಸಿ.ಎಲ್ ಡಿಪೋಗಳ ವಿಳಾಸ |
|---|---|---|
| 1. | ಬೆಂಗಳೂರು ನಗರ | ಕೆ.ಎಸ್.ಬಿ.ಸಿ.ಎಲ್ ಮದ್ಯ ಮಳಿಗೆ ಸರ್ವೆ ಸಂ.70/5 ಚೆಲುವಪ್ಪ ಕೈಗಾರಿಕ ಪ್ರದೇಶ, ಚೀಮಸಂದ್ರ, ವಿರ್ಗೋನಗರ ಅಂಚೆ, ಬೆಂಗಳೂರು - 560049. |
| 2. | ಬೆಂಗಳೂರು ನಗರ | ಕೆ.ಎಸ್.ಬಿ.ಸಿ.ಎಲ್ ಮದ್ಯ ಮಳಿಗೆ, ಸರ್ವೆ ನಂ.120, ಕೆ.ಎಸ್.ಡಬ್ಲ್ಯೂ.ಸಿ ವೇರ್‌ಹೌಸ್, ಹೊಂಗಸಂದ್ರ ಗ್ರಾಮ, ಬೇಗೂರು ಹೋಬಳಿ, ಹೊಸೂರು ರಸ್ತೆ, ಬೆಂಗಳೂರು. |
| 3. | ಬೆಂಗಳೂರು ನಗರ | ಕೆ.ಎಸ್.ಬಿ.ಸಿ.ಎಲ್ ಮದ್ಯ ಮಳಿಗೆ ಸಕಲವಾರ-II, ನಂ.94 ಖಾನೇಸುಮಾರಿ ನಂ.139/139, ಎಸ್.ಎಲ್.ವಿ ಕೈಗಾರಿಕಾ ವಸಾಹತು, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಸಕಲವಾರ, ಬೆಂಗಳೂರು-560083. |
| 4. | ಬೆಂಗಳೂರು ಗ್ರಾಮಾಂತರ | ಕೆ.ಎಸ್.ಬಿ.ಸಿ.ಎಲ್ ಮದ್ಯ ಮಳಿಗೆ, ಸರ್ವೆ ನಂ.20, ವಡೇರಹಳ್ಳಿ, ದ್ಲಾಸನಪುರ ಹೋಬಳಿ, (ಹೊಸ ಎ.ಪಿ.ಎಂ.ಸಿ ಯಾರ್ಡ್‌ಗೆ ಹೊಂದಿಕೊಂಡಂತೆ), ಬೆಂಗಳೂರು ಉತ್ತರ ತಾಲ್ಲೂಕ್. |
| 5. | ಹಾಸನ | ಕೆ.ಎಸ್.ಬಿ.ಸಿ.ಎಲ್ ಮದ್ಯ ಮಳಿಗೆ, ಸರ್ವೆ ನಂ.61/ಪಿ, ಪ್ಲಾಟ್ ನಂ 211-ಸಿ ಮತ್ತು 211-ಡಿ, ಮೈಸೂರು-ಹಾಸನ ರಸ್ತೆ, ಹಾಸನ ಇಂಡಸ್ಟ್ರಿಯಲ್ ಏರಿಯಾ, ಹಾಸನ. |
| 6. | ಮೈಸೂರು | ಕೆ.ಎಸ್.ಬಿ.ಸಿ.ಎಲ್ ಮದ್ಯ ಮಳಿಗೆ (ಮೈಸೂರು-ಹೆಬ್ಬಾಳ), ಕೆ.ಎಸ್.ಡಬ್ಲ್ಯೂ.ಸಿ, ಗೋಡೌನ್, ಘಟಕ-3, ಮಹಾಲಕ್ಷ್ಮಿ ಬಡಾವಣೆ, ಹೆಚ್.ಪಿ.ಸಿ ರಸ್ತೆ, ಹೆಬ್ಬಾಳ ಕೈಗಾರಿಕ ಪ್ರದೇಶ, ಮೈಸೂರು-570016. |
| 7. | ಶಿವಮೊಗ್ಗ | ಕೆ.ಎಸ್.ಬಿ.ಸಿ.ಎಲ್ ಮದ್ಯ ಮಳಿಗೆ ಸೈಟ್ ನಂ.2&3, ಖಾತಾ ನಂ.463-416-416, ವಾರ್ಡ್ ನಂ.23, ಜನ್ನತ್‌ನಗರ, ಸಾಗರ, ಶಿವಮೊಗ್ಗ ಜಿಲ್ಲೆ. |

ದ.ಮುಂದಿನ ಕ್ರಮಕ್ಕಾಗಿ
ಕಡತವನ್ನು ಮಂಡಿಸಿ.

ಈ ಮೇಲಿನ ಘಟಕಗಳಿಗೆ ಸೃಜಿಸಲು ಪ್ರಸ್ತಾಪಿಸಿರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ:

| ಕ್ರ.ಸಂ. | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|
| 1. | ಅಬಕಾರಿ ನಿರೀಕ್ಷಕರು (ವೇತನ ಶ್ರೇಣಿ ರೂ.20000-36300) | 07 |
| 2. | ಪ್ರಥಮ ದರ್ಜೆ ಸಹಾಯಕರು (ವೇತನ ಶ್ರೇಣಿ ರೂ.14550 – 26700) | 07 |
| 3. | ಅಬಕಾರಿ ರಕ್ಷಕರು (ವೇತನ ಶ್ರೇಣಿ ರೂ.11600 – 21000) | 07 |
| | ಒಟ್ಟು | 21 |

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಮುಂದಿನಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂ.ಎಫ್‌ಡಿ 142 ಇಎಐ 2013, ಬೆಂಗಳೂರು, ದಿನಾಂಕ:05-08-2014.</u>**

ಮೇಲಿನ ಪ್ರಸ್ತಾವನೆಯಲ್ಲಿ ನಮೂದಿಸಿರುವ ಡಿಪೋಗಳಿಗೆ ಮೇಲ್ವಿಚಾರಣೆ ನಡೆಸಲು ಅಬಕಾರಿ ಇಲಾಖೆಯಲ್ಲಿ ಈ ಕೆಳಗಿನಂತೆ 21 ಹೊಸ ಹುದ್ದೆಗಳನ್ನು ಸೃಜಿಸಲು ಸರ್ಕಾರದ ಮಂಜೂರಾತಿ ನೀಡಿದೆ.

| ಕ್ರ.ಸಂ. | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|
| 1. | ಅಬಕಾರಿ ನಿರೀಕ್ಷಕರು (ವೇತನ ಶ್ರೇಣಿ ರೂ.20000-36300) | 07 |
| 2. | ಪ್ರಥಮ ದರ್ಜೆ ಸಹಾಯಕರು (ವೇತನ ಶ್ರೇಣಿ ರೂ.14550 – 26700) | 07 |
| 3. | ಅಬಕಾರಿ ರಕ್ಷಕರು (ವೇತನ ಶ್ರೇಣಿ ರೂ.11600 – 21000) | 07 |
| | ಒಟ್ಟು | 21 |

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಅನಧಿಕೃತ ಟಿಪ್ಪಣಿ ಸಂ.ಸಿಆಸುಇ 138 ಸಿಶಾಸೇ 2014 ದಿನಾಂಕ 08-07-2014ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ವೆಂಕಟೇಶ್.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

ಇವರಿಗೆ,

1. ಪ್ರಧಾನ ಮಹಾಲೇಖಪಾಲರು(ಎ ಮತ್ತು ಇ/ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಅಬಕಾರಿ ಆಯುಕ್ತರು, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಬಿ.ಸಿ.ಎಲ್, ಬೆಂಗಳೂರು.
4. ಎಲ್ಲಾ ಅಬಕಾರಿ ಉಪ ಆಯುಕ್ತರುಗಳಿಗೆ.
5. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಸಿಬ್ಬಂದಿ).
6. ಶಾಖಾ ರಕ್ಷಿತ ಕಡತ/ಹೆಚ್ಚುವರಿ ಪ್ರತಿ.